ಸೇಡಂ ತಾಲ್ಲೂಕಿನ ಕಲ್ಕಂ ಗ್ರಾಮಕ್ಕೆ ನೆಲಮಟ್ಟದ ಜಲ ಸಂಗ್ರಾಹಾಲಯ ನಿರ್ಮಿಸಿ ಕುಡಿಯುವ ನೀರನ್ನು ಒದಗಿಸುವುದು.

157(437)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ತಾಲ್ಲೂಕಿನ ಕಲ್ಕಂ ಗ್ರಾಮಕ್ಕೆ ನೆಲಮಟ್ಟದ ಜಲಸಂಗ್ರಹಾಲಯ ನಿರ್ಮಿಸಿ ನೇರ ವಿತರಣೆ ಪದ್ಧತಿಯಿಂದ ಕುಡಿಯುವ ನೀರನ್ನು ಒದಗಿಸಲಾಗುವುದೆಂದು ಸರ್ಕಾರ ಮಾಹಿತಿ ನೀಡಿದ್ದು ನಿಜವಲ್ಲವೇ?

ಆ) ಈ ಯೋಜನೆಗಾಗಿ 1995-96ರಿಂದ 1999-2000ವರೆಗೆ ರೂ.6.314 ಲಕ್ಷ ಖರ್ಚು ಮಾಡಲಾಗಿದೆ ಎಂದು ತಿಳಿಸಿದ್ದು ಇದುವರೆಗೂ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗದಿರಲು ಕಾರಣವೇನು?

ಇ) ಕುಡಿಯುವ ನೀರಿಲ್ಲದೆ ತೊಂದರೆ ಅನುಭವಿಸುತ್ತಿರುವ ಕಲ್ಕಂ ಗ್ರಾಮದ ನಾಗರೀಕರಿಗೆ ಈಗಲಾದರೂ ನೀರನ್ನು ಒದಗಿಸುವ ವ್ಯವಸ್ಥೆ ಸರ್ಕಾರ ಮಾಡುವುದೇ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹೌದು.

ಆ) ಕಲ್ಕಂ ಗ್ರಾಮವು ಸಮಸ್ಯಾತ್ಮಕ ವಲಯದಲ್ಲಿದ್ದು ಕೊಳವೆ ಬಾವಿಗಳು ವಿಫಲವಾದ್ದರಿಂದ 8 ಕಿ.ಮೀ. ದೂರದಲ್ಲಿರುವ ಕಾಚವಾರ ಗ್ರಾಮದ ಹತ್ತಿರ ಜಲಮೂಲವನ್ನು ಸ್ಥಾಪಿಸಿದ್ದು ಗ್ರಾಮಕ್ಕೆ ನೀರು ಪೂರೈಕೆ ಮಾಡಲಾಗುತ್ತಿದೆ. ಹಾಗೂ ರೈಸಿಂಗ್ ಮೈನ್ ಮಧ್ಯದಲ್ಲಿ ನೆಲಮಟ್ಟದ ನೀರು ಶೇಖರಣಾ ತೊಟ್ಟಿಯ (ಸಂಪ್) ನಿರ್ಮಾಣ ಕೆಲಸವು ಪೂರ್ಣಗೊಳ್ಳುವ ಹಂತದಲ್ಲಿದೆ.

ಇ) ಕಾಮಗಾರಿಯನ್ನು ಆದ್ಯತೆ ಮೇಲೆ ಪೂರ್ಣಗೊಳಿಸಿ ಕಲ್ಕಂ ಗ್ರಾಮದಲ್ಲಿ ನೀರು ಸರಬರಾಜನ್ನು ಉತ್ತಮಪಡಿಸಲಾಗುವುದು.

ರಾಜ್ಯದ ಗ್ರಾಮಗಳ ಅಭಿವೃದ್ಧಿ ಕಾರ್ಯಕ್ರಮ.

158(291)

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ(ಶಿವಮೊಗ್ಗ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಒಟ್ಟು ಗ್ರಾಮಗಳೆಷ್ಟು ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿ ಒಂದು ಕಿ.ಮೀ. ರಸ್ತೆಗೆ ಡಾಂಬರೀಕರಣ ಮಾಡಲು ತಗಲುವ ವೆಚ್ಚವೆಷ್ಟು; (ವಿವರ ಒದಗಿಸುವುದು)

ಆ. ಶಿವಮೊಗ್ಗ ತಾಲ್ಲೂಕಿನಲ್ಲಿ ರೋಜ್‌ಗಾರ್ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾದ ಹಣ ಎಷ್ಟು; (ಖರ್ಚಿನ ವಿವರಗಳನ್ನು ಒದಗಿಸುವುದು)

ಇ. ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿರುವ ಬೋರ್‌ವೆಲ್‌ಗಳೆಷ್ಟು? ದುರಸ್ತಿಗೊಳಗಾದ ಬೋರ್‌ವೆಲ್‌ಗಳಿಗೆ ದುರಸ್ತಿ ಮಾಡಲು ಇರುವ ತೊಂದರೆಗಳೇನು? (ವಿವರ ಒದಗಿಸುವುದು)

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ. ರಾಜ್ಯದಲ್ಲಿ ಒಟ್ಟು 27066 ಕಂದಾಯ ಗ್ರಾಮಗಳಿವೆ. ಒಂದು ಕಿಲೋ ಮೀಟರ್ ರಸ್ತೆಯನ್ನು ಕೇವಲ ಡಾಂಬರೀಕರಣ ಮಾಡಲು ಸರಾಸರಿ ರೂ.2.00 ಲಕ್ಷಗಳು ವೆಚ್ಚವಾಗುತ್ತದೆ. ರಾಜ್ಯಕ್ಕೆ ಸುಮಾರು ರೂ.541.32 ಕೋಟಿ ವೆಚ್ಚ ತಗಲುತ್ತದೆ.

ಆ. ಶಿವಮೊಗ್ಗ ತಾಲ್ಲೂಕಿನಲ್ಲಿ ಜವಾಹರ್ ಗ್ರಾಮ ಸಮೃದ್ಧಿ ಯೋಜನೆಗೆ 2000-2001ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ರೂ.39.94 ಲಕ್ಷಗಳು ಮತ್ತು ಖರ್ಚಾದ ಅನುದಾನ ರೂ.19.54 ಲಕ್ಷಗಳು (ಜನವರಿ 2001ರ ಅಂತ್ಯದವರೆಗೆ)

ಇ. ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 320 ಕೊಳವೆಬಾವಿಗಳು ಇರುತ್ತದೆ. 21 ಕೊಳವೆಬಾವಿಗಳು ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ. ಇವುಗಳ ಹೊರತು, ಇತರೆ ಕೊಳವೆ ಬಾವಿಗಳ ದುರಸ್ತಿ ಬಗ್ಗೆ ದೂರುಗಳು ಬಂದ ಕೂಡಲೆ ಅವುಗಳ ದುರಸ್ತಿಗೆ ಆದ್ಯತಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಶಿವಮೊಗ್ಗ ನಗರದ ಮೆಗ್ಗಾನ್ ಆಸ್ಪತ್ರೆ ಕಟ್ಟಡದ ನಿರ್ಮಾಣ.